
ವೆಂಕಟೇಶನಿಗೆ ತನ್ನ ಸಂಪಾದಕರ ಬಗ್ಗೆ ಸಿಟ್ಟು ನೆತ್ತಿಗೇರಿತು. ಬೇರೆ ಯಾವ ವಿಷಯವೂ ಸಿಗಲಿಲ್ಲವಾ ಇವರಿಗೆ ಅನಿಸಿತು. ಯೋಚನೆ ಮಾಡಿ ಮಾಡಿ ಜ್ವರ ಬಂದಿದೆ ಎನಿಸಿ ಪದೇ ಪದೇ ಹಣೆ ಮುಟ್ಟಿ ನೋಡಿಕೊಳ್ಳತೊಡಗಿದ. ಮೈ ಬಿಸಿ ಇರಲಿಲ್ಲ. ಅದೊಂದು ಗೀಳು ಎನಿಸಿತು. ಆಯಾಸ, ಬಾಯಾರಿಕೆ. ಫೋನು ರಿಸೀವ್ ಮಾಡಲೂ ಶಕ್ತಿ ಇಲ್ಲವೆನಿಸುತ್ತಿತ್ತು. ಏನಾದರೂ ಕೆಲಸದಲ್ಲಿ ತೊಡಗಿಸಿಕೊಳ್ಳದಿದ್ದರೆ ಈ ಮನಃಸ್ಥಿತಿ ಬದಲಾಗದು ಎಂದು ಮೂರನೇ ದಿನ ಅವನಿಗೆ ಅರಿವಾಯಿತು. ಎದ್ದು ಆಫೀಸಿಗೆ ಹೊರಟ.



ಸಂಪಾದಕರಿಗೆ ಆದದ್ದನ್ನೆಲ್ಲಾ ವಿವರಿಸಿದ. ತನ್ನ ಅನಾರೋಗ್ಯವನ್ನು ಮುಚ್ಚಿಟ್ಟುಕೊಳ್ಳಲು ಯತ್ನಿಸಿದರೂ ಆಗಲಿಲ್ಲ. ಕಣ್ಣಂಚಿನಲ್ಲಿ ನೀರಾಡಿ ಮೂಗು ಸೊರಗುಟ್ಟಿತು. ಅವರಿಂದ ಒಂದೆರಡು ಒಳ್ಳೆಯ ಮಾತು ನಿರೀಕ್ಷಿಸಿದ್ದ. ಆದರೆ 'ಸ್ಟುಪಿಡ್' ಎಂಬ ಬೈಗುಳ ಬಂತು. ಸಂಪಾದಕರು ಉರಿದು ಬಿದ್ದರು. ಸೆಲಬ್ರಿಟಿಗಳು, ಸಾಮೂಹಿಕವಾಗಿ ಸತ್ತವರ ವರದಿಗಳನ್ನು ಎಲ್ಲರೂ ಮಾಡುತ್ತಾರೆಂದೂ ಅಲ್ಲಿ ನಡೆಯುವುದು ಬಹುತೇಕ ನಾಟಕೀಯವೆಂದೂ ಕೂಗಾಡಿ 'ಗೆಟ್ ಔಟ್' ಎಂದರು.

"ಬೇರೆಯವರಿಗೆ ಅದು ತೋರಿಕೆ ಇರಬಹುದು ಸರ್, ಆದರೆ ಸತ್ತೋರ ಮನೆಯವರಿಗೆ ಅದು ಶೋಕಾನೇ ತಾನೇ" ಎಂದು ಕೇಳಿಯೇ ಬಿಟ್ಟ. ಅರಿವಿಲ್ಲದೇ ಅವನ ದನಿಯೂ ಏರಿತ್ತು. ಇದನ್ನು ನಿರೀಕ್ಷಿಸದ ಸಂಪಾದಕರು "ಮೊದ್ಲು ಹೇಳಿದ್ದು ಮಾಡು, ಅಲ್ಲೀವರೆಗೂ ಇಲ್ಲಿ ಕಾಲಿಡಬೇಡ ಸ್ಟುಪಿಡ್ ಫೆಲೋ" ಎಂದುಬಿಟ್ಟರು. ವೆಂಕಟೇಶನ ಸಂಕಟ ಮತ್ತಷ್ಟು ಹೆಚ್ಚಾಯಿತು, ಗಂಟಲು ಉಬ್ಬಿ ಬಂತು. ಬಸವನಗುಡಿಯ ಬೀದಿಯಲ್ಲಿ ಸುಮ್ಮನೇ ಅಡ್ಡಾಡಿದ. ಪ್ರೆಸ್ ಕ್ಲಬ್ಬಿಗೆ ಹೋಗಿ ಕುಳಿತ. ಪ್ರಸನ್ನ ವ್ಯಾಪ್ತಿ ಪ್ರದೇಶದ ಹೊರಗಿದ್ದಾನೆಂದು ಅವನ ಫೋನು ತಿಳಿಸಿತು. ರೂಮಿಗೆ ಬಂದು ತುಸುಹೊತ್ತು ಮಲಗಿದ. ಸ್ವಲ್ಪ ಹೊತ್ತಿನ ನಂತರ ಎದ್ದು ಮೆಜೆಸ್ಟಿಕ್ಕಿಗೆ ಹೋಗಿ ಸೀದಾ ಊರಿನ ಬಸ್ಸು ಹತ್ತಿ ಬಿಟ್ಟ.

ಬಸ್ಸು ಗೊರಗುಂಟೆಪಾಳ್ಯ ದಾಟಿರಬಹುದು. ಪ್ರಸನ್ನನ ಫೋನು ಬಂತು. ನಡೆದದ್ದನ್ನೆಲ್ಲಾ ಚುಟುಕಾಗಿ ಹೇಳಿದ, ಜೊತೆಗೆ ತನ್ನ ನಿರ್ಧಾರವನ್ನೂ. ಚೆನ್ನಾಗಿ ಬೈದ ಪ್ರಸನ್ನ, ವಹಿಸಿದ ಜವಾಬ್ದಾರಿ ಪೂರ್ತಿ ಮಾಡದಿರುವುದೇ ನಿನ್ನ ಈ ಮನಃಸ್ಥಿತಿಗೆ ಕಾರಣವೆಂದು ಹೇಳಿ, ಕೂಡಲೇ ಬಸ್ಸಿಳಿದು ವಾಪಸ್ ಬರುವಂತೆ ಆಗ್ರಹಿಸಿದ.